



ಮರುಳು ಮಾಡುವ ಮರಳಬೇಲಿ

ಇನ್ನೊಂದು ವರ್ಷ ಕಳೆದರೆ 'ಮರುಳು ಮಾಡುವ ಮರಳಬೇಲಿ' ಸುಧಾ ಬರಹಕ್ಕೆ ಇಪ್ಪತ್ತೈದು ವರ್ಷ!

ರೂಪಾಂತರಗೊಂಡಿವೆ. 200 ವರ್ಷಗಳ ಹಿಂದೆ ಎತ್ತಿನಗಾಡಿಯೂ ಇಲ್ಲದ ನೆಲೆಯಲ್ಲಿ ತಾಸಿಗೆ 120 ಕಿಲೋ ಮೀಟರ್ ವೇಗದಲ್ಲಿ ವಾಹನಗಳು ಓಡಿವೆ. ಬಂಗಾರದಂಥ ಭತ್ತ ಬೆಳೆದಿದ್ದ ಸುವರ್ಣಗದ್ದೆ ಕಣ್ಮರೆಯಾಗಿದೆ. 'ತಾರಿಗೆ ಸಂಕ ಹಾಕಿದ್ರೆ ಸಾರಿಗೆ ಸುಖ, ಸಾರಿಗೆಗೆ ಸುಂಕ ಹಾಕಿದ್ರೆ ಸರಕಾರಕ್ಕೆ ಸುಖ' ಎಂಬ ಒಳನಾಡು ನದಿ ಸಾರಿಗೆಯ ಕಾಲದ ನುಡಿಯಂತೆ ಹೆದ್ದಾರಿ ಓಟಕ್ಕೆ ಕಾಸು ಕೇಳುತ್ತಿದೆ. ಶತಶತಮಾನಗಳಿಂದ ಪ್ರವಾಹ, ಉಪ್ಪುನೀರು ಸಹಿಸಿ ಗೆದ್ದ ಕೃಷಿ ಕಲಿಕೆಗಳೆಲ್ಲ ಹೇಳ ಹೆಸರಿಲ್ಲದಂತಾಗಿ ಬೆಲೆ ಕಳೆದುಕೊಂಡಿವೆ. ಇವುಗಳ ಬಗ್ಗೆ ಮಾತಾಡುವುದು ನಗೆಪಾಟಲಿನ ಸಂಗತಿಯಂತೆ ಕಾಣಿಸುತ್ತದೆ.

ಹೆದ್ದಾರಿ ಪ್ರೇರಣೆಯಿಂದ ಪಂಕ್ಚರ್ ಅಂಗಡಿ, ಪಾನ್ ಶಾಪ್, ಗ್ರ್ಯಾನೈಟ್, ಆಮ್ಲೆಟ್, ಗೋಬಿ, ಸಿಮೆಂಟ್, ಹೋಟೆಲ್, ಆಸ್ಪತ್ರೆ, ಡಾಬಾಗಳ ಸಂತೆ ಚಿಗುರಿ ಹಬ್ಬುತ್ತಿದೆ. ಲಾರಿ ಕ್ಲೀನರ್‌ಗಳು ಎಸೆದ ಎಣ್ಣೆ ಜಿಡ್ಡಿನ ಬಟ್ಟೆಗಳು, ಪ್ರವಾಸಿಗರು ಕುಡಿದೆಸೆದ ಬಾಟಲಿ, ಪ್ಲಾಸ್ಟಿಕ್ ತ್ಯಾಜ್ಯಗಳು, ಉಚ್ಚೆಯ ನಾತಗಳಲ್ಲಿ ಸುವರ್ಣಗದ್ದೆಯ ಅಭಿವೃದ್ಧಿಯ ಹೊಸ ಕೊಯ್ಲು ಶುರುವಾಗಿದೆ. ಅವಸರದ ಓಟಕ್ಕೆ ಅಭಿವೃದ್ಧಿ ಚಕ್ರದಡಿ ಸಿಕ್ಕು ಅವಲಕ್ಕಿಯಾಗಿ ಹೆದ್ದಾರಿಗಂಟಿದ ಜೀವಗಳನ್ನು ನೋಡುವುದು ಜನಕ್ಕೂ ಅಭ್ಯಾಸವಾಗಿದೆ. ಭತ್ತದ ಗದ್ದೆ, ಶೇಂಗಾ ಗದ್ದೆಗೆ ಕಳ್ಳ ದನ ನುಗ್ಗಿ ಬೆಳೆ ತಿಂದಾಗ ನಷ್ಟಕ್ಕೆ ದಿನವಿಡೀ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಒಕ್ಕಲರ ಭೂಮಿಯನ್ನೇ ರಸ್ತೆ ನುಂಗಿದೆ, ಹೊಳೆಗದ್ದೆಯ ನೀರನ್ನೆಲ್ಲ ಕುಡಿದಿದೆ. ಊರು ಸುಧಾರಣೆಯಾಗಬೇಕೆಂದು ಹಂಬಲಿಸಿದವರೆದುರು ಗುರುತೇ ಸಿಗದಂತೆ ದೊಡ್ಡ ಬದಲಾವಣೆ ಘಟಿಸಿದೆ.

ಕೆಲವು ತಿಂಗಳು ಮುಂಚೆ ಮಣ್ಣಿನ ಜೀವ ಮನ್ನಾ ಗೌಡರು ಮಳೆಗೆ ಬಿದ್ದ ಮರಳಿನ ಕಂಟದಂತೆ ಕುಸಿದು ಸದ್ದಿಲ್ಲದೇ ಇಹಲೋಕ ಯಾತ್ರೆ ಮುಗಿಸಿದರು. 20 ವರ್ಷಗಳ ಹಿಂದೆ ಹೆದ್ದಾರಿ ಪಕ್ಕದ ಸಣ್ಣ ಜಾಗದಲ್ಲಿ ಸುಗಂಧ ಸುರಗಿ ಮೊಗ್ಗು ಕೊಯ್ದು ಒಣಗಿಸುತ್ತಿದ್ದ ಹಾಲಕ್ಕಿ ಪೋರರು ಇವತ್ತು ಕಾಣಿಸುತ್ತಿಲ್ಲ. ಊರು ಮುರಿದು ಕಟ್ಟಿದ ಅಭಿವೃದ್ಧಿಯಲ್ಲಿ ನೆಲದ ಕೌಶಲ ಮಾಯವಾಗುತ್ತಿವೆ. ರಸ್ತೆಯ ಅಗಲ ಎಷ್ಟು ಅಗತ್ಯವೆಂದು ಹೇಳಿದವರು ಯಾರು? ಸುವರ್ಣ ಗದ್ದೆಯನ್ನು ಮುಗಿಸಿ ಹೊಳೆಗದ್ದೆಯಲ್ಲಿ ಎದ್ದ ಟೋಲ್ ನಾಕಾ ಸ್ಕಿಲ್ ಇಂಡಿಯಾ ಹಾದಿ ತೋರಿಸಬಹುದೇ? ಗೊತ್ತಿಲ್ಲ, ಸಂಗ್ರಾಮದ ಹೊಡೆತಕ್ಕೆ ಗ್ರಾಮಭಾರತ ಸಾಯುತ್ತಿದೆ. ಇಷ್ಟು ವರ್ಷಗಳ ಸಾಗರದ ಜೊತೆಗಿನ ಜಗಳ, ತಕರಾರಿನ ನಡುವೆಯೂ ನಾನಂತೂ ಹಾಗೆಯೇ ಇದ್ದೆ. ಓಡುವ ಅವಸರಕ್ಕೆ ಅಂಟಿಕೊಂಡು ದಾರಿ ತಪ್ಪಿದ್ದು ನಾನಲ್ಲ ನೀವೆಂದು ಹುಚ್ಚುಕೋಡಿ ಒಡಗಣೆ ಬೇಸರಿಸುತ್ತಿದೆ.

ಚಿತ್ರಗಳು ಲೇಖಕರವು

